ಸಿ.ಸಿ. ನಂಃ 3064/2019

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ಚಾ.ಸಾ ಃ

ಪ್ರಾ.ಸಾ ಃ

ಸಾಕ್ಷಿದಾರರ ಹೆಸರು ಃ ಅಶ್ರಫ್ ಕೆ ಪಿ

ತಂದೆ ಹೆಸರು ಃ ಅಸ್ಸೈನಾರ

ಪ್ರಾಯ ಃ 42 ವರ್ಷ

ಉದ್ಯೋಗ ಃ ಕೃಷಿ

ವಾಸಸ್ಥಾನ : ನೆ. ಮುಡ್ನೂರು ಪುತ್ತೂರು

ಪ್ರಮಾಣ ವಚನ ಭೋದಿಸಿದ ದಿನಾಂಕ ಃ 26.10.2021

**<u>ಮುಖ್ಯ ವಿಚಾರಣೆಃ ಶ್ರೀ ಎಪಿಪಿ ಅವರಿಂದಃ</u>**

ಈಗ ನೋಡುತ್ತಿರುವ ದಾಖಲಾತಿ ನಿಪಿ-8 ಕ್ಕೆ ಸುಮಾರು 4 ವರ್ಷಗಳ ಹಿಂದೆ ಸ್ವತ್ತು ಸ್ವಾದೀನತಾ ಮಹರಿಗೆ ಬಾವಾ ಜ್ಯುವೆಲ್ಲರಿಯಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-8 ಸಿ ಎಂದು ಗುರುತಿಸಲಾಯಿತು. ಅನ್ವರ ಅಲಿ ಎಂಬ ಆರೋಪಿ ಹಾಗೂ ಪೊಲಿಸರೊಂದಿಗೆ ಹೋಗಿರುತ್ತೇನೆ. ಆರೋಪಿ ಚಿನ್ನ ಕದ್ದಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಅದು ಜ್ಯುಯೇಲರಿಗೆ ಮಾರಾಟ ಮಾಡಿದ್ದು ಎಂದು ಅದರ ಮಾಲಿಕರು ಒಪ್ಪಿಕೊಂಡಿದ್ದು ಅದನ್ನು ಹಾಜರು ಪಡಿಸಿರುತ್ತಾರೆ. ಒಟ್ಟು 5 ಚಿನ್ನದ ಉಂಗುರಗಳು, ಸಣ್ಣ-ಸಣ್ಣ ಚಿನ್ನದ ತುಂಡುಗಳು ಇದ್ದು ಅದನ್ನು ಹಾಜರು ಪಡಿಸಿದ್ದು ಅದರ ಅಂದಾಜು ಬೆಲೆ ರೂ 40000/- ಆಗಿರುತ್ತದೆ.

ನಂತರ ಪೋಲಿಸರು ಸದರಿ ಚಿನ್ನವನ್ನು ವಶಪಡಿಸಿಕೊಂಡಿರುತ್ತಾರೆ. ಆ ದಿನ ವಶಪಡಿಸಿದ ಸಮಯದಲ್ಲಿ ಬರೆದ ದಾಖಲೆ ನಿಪಿ-8 ದಾಖಲೆ ಆಗಿರುತದೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನೋಡುತ್ತಿರುವ ದಾಖಲಾತಿ ನಿಪಿ-9 ಕ್ಕೆ ಸುಮಾರು 4 ವರ್ಷಗಳ ಹಿಂದೆ ಸ್ವತ್ತು ಸ್ವಾದೀನತಾ ಮಹರಿಗೆ ಮಂಜನಡ್ವದ ಭಾರತ ಪೆಟ್ರೋಲ್ ಬಂಕನಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-9 ಸಿ ಎಂದು ಗುರುತಿಸಲಾಯಿತು. ಸಾಧೀಕ್ ಎಂಬ ಆರೋಪಿ ಹಾಗೂ ಪೊಲಿಸರೊಂದಿಗೆ ನಾನು ಹೋಗಿರುತ್ತೇನೆ. ಅಲ್ಲಿ ಆರೋಪಿಯು ಪಾಸಪೊರ್ಟ ಅಡವಿಟ್ಟು ಕಾರಿಗೆ ಡಿಸೇಲ್ ಹಾಕಿಸಿಕೊಂಡ ಬಗ್ಗೆ ಪೊಲಿಸರ ಬಳಿ ತಪ್ಪನ್ನು ಒಪ್ಪಿಕೊಂಡ ಮೇರೆಗೆ ನಾವು ಭಾರತ ಪೆಟ್ರೊಲ್ ಬಂಕಗೆ ಹೋಗಿದ್ದು, ಅಲ್ಲಿ ಪೋಲಿಸರ ಮುಂದೆ ಪಾಸಪೊರ್ಟನ್ನು ಬಂಕಿನಲ್ಲಿದ್ದವರು ಹಾಜರು ಮಾಡಿರುತ್ತಾರೆ. ನಂತರ ಪೋಲಿಸರು ಸದರಿ ಪಾಸಪೊರ್ಟವನ್ನು ವಶಪಡಿಸಿಕೊಂಡಿರುತ್ತಾರೆ. ಆ ದಿನ ವಶಪಡಿಸಿದ ಸಮಯದಲ್ಲಿ ಬರೆದ ದಾಖಲೆ ನಿಪಿ-9 ದಾಖಲೆ ಆಗಿರುತ್ತದೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-5 ಮತ್ತು ನಿಪಿ-10 ರಿಂದ 13 ರಲ್ಲಿರುವ ಚಿನ್ನ ಹಾಗೂ ಪಾಸಪೊರ್ಟನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಚಿನ್ನದ ಉಂಗರು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಡಿಕೆ ವಕೀಲರಿಂದ:</u>**

ಅಬ್ದುಲ್ ಖಾರದ ಮಾಲು ಸಿಕ್ಕಿದೆ ಬನ್ನಿ ಎಂದರು ಆಗ ನಾನು ಹೋಗಿ ಮಹಜರಗೆ ಸಹಿ ಹಾಕಿದೆ. ನಾನು ಠಾಣೆಗೆ ಬೇರೆ ವಿಷಯಕ್ಕೆ ಬರುತ್ತಿದ್ದು ಹೋಗುತ್ತಿದ್ದು ನನಗೆ ಅಬ್ದುಲ್ ಖಾದರ ಪರಿಚಯ. ನಾನು ಗ್ರಾಂ ಪಂಚಾಯತ್ **2010** ರಿಂದ **2015** ತನಕ ಗ್ರಾ. ಪಂ ಸದಸ್ಯನಾಗಿದೆ. ನನಗೆ ಪೊ. ಠಾಣೆಗೆ ಅಬ್ಯಾಸ ಇದೆ ಎಂದರೆ ಇಲ್ಲ. ನಾನು ಈ ಕೇಸು ಹೋರತು ಪಡಿಸಿ ಬೇರೆ ಕೇಸನಲ್ಲಿ ಮಹರಗೆ ಸಹಿ ಮಾಡಿದ್ದೇನೆ. ಠಾಣೆಗೆ ಬರಲು ನನಗೆ ನೋಟಿಸು ನೀಡಿಲ್ಲ. ನನ್ನ ಮೊಬೈಲ ನಂಬರ ಇನ್ಸಪೆಕ್ಟರಲ್ಲಿ ಇಲ್ಲ. ಬೇರೆ ಎಲ್ಲಿಯಾದರೂ ಕೇಳಿ ಪಡೆದಿರಬಹುದು. ನಾನು ನೆ. ಮುಡ್ನೂರು ಬೆಃ **8-30** ಹೊರಟು ಠಾಣೆಗೆ **9-00** ಕ್ಕೆ ತಲುಪಿದ್ದೇನೆ. ಠಾಣೆಗೆಯಲ್ಲಿ **20-30** ಜನ ಪೋಲಿಸರು ಇದ್ದರು. ನಾವು ಠಾಣೆಯಿಂದ ನನ್ನ ಸ್ವಂತ ಕಾರಿನಲ್ಲಿ ನಾನು ಹೊರಟೆ. ಪೊಲಿಸರು, ಆರೋಪಿಗಳು, ಇನ್ಸಪೆಕ್ಟರ ಇದ್ದರು. ಸದರಿ ದಿನ **2** ಜನ ಆರೋಪಿಗಳು ಜೇಪಿನಲ್ಲಿ ಬಂದರು. ನಾನು ಪೊಲಿಸ ಠಾಣೆಗೆ ಹೋದಾಗ ಈ ಪ್ರಕರಣಕ್ಕೆ ಸಂಬಂದಿಸಿದ್ದಂತೆ ಎಷ್ಟು ಜನ ಆರೋಪಿಗಳು ಇದ್ದರು ಎಂದು ಹೇಳಲು ಆಗುವುದಿಲ್ಲ. ಪೊ. ಜೇಪು ನಂಬರ ಗೊತ್ತಿಲ್ಲ. ಚಾಲಕ ಯಾರು ಎಂದು ಗೊತ್ತಿಲ್ಲ. ಪೋಲಿಸಠಾಣೆಯಿಂದ ದರ್ಬೆ ಮಾರ್ಗವಾಗಿ ಬಸ್ಟ್ಯಾಂಟ ನಂತರ ನೇರವಾಗಿ ಕೋರ್ಟ ರಸ್ತೆಗೆ ಬಂದೆವು. ಕೋರ್ಟ ರಸ್ತೆಗೆ ಬಂದಾಗ ಬೆಃ **11-00** ರಿಂದ **12-00** ಗಂಟೆ ಇರಬಹುದು.

ಸಂಪ್ಯ ಕಡೆಯಿಂದ ಬರುವಾಗ ಬಾವಾ ಜ್ಯೂವೆಲರ್ಸ ಬಲಗಡೆ ಬರುತ್ತದೆ. ಸದರಿ ಅಂಗಡಿ ನೆಲ ಅಂತಸ್ತಿನಲ್ಲಿ ಇದೆ. ನಾವು ಸ್ಥಳಕ್ಕೆ ಬೇಟಿ ನೀಡಿದ್ದಾಗ 2 ಜನ ಗಿರಾಕಿಗಳು ಇದ್ದರು. ಸದರಿ ಅಂಡಿಯಲ್ಲಿ ಒಬ್ಬರು ಸಿಬ್ಬಂದಿ ಒಳಗೆ ಮತ್ತು ಆಚೇ ಒಬ್ಬರು ಇದ್ದರು. ಪೊಲಿಸರು ನನ್ನ ಮುಂದೆ ಬಾವಾ ಜ್ಯೂಲರ್ಸ ಯಾರ ಅಂಗಡಿ ಎಂದು ವಿಚಾರಣೆ ಮಾಡಿಲ್ಲ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಂಗಡಿ ನಂಬರ ವಿಚಾರಣೆ ನನ್ನ ಸಮಕ್ಷಮ ಮಾಡಿಲ್ಲ. ಪೋಲಿಸರು ಮೊದಲು ಅಂಗಡಿಗೆ ಹೋಗಿದ್ದಾರೆ ನಂತರ ನಾನು ಹೋದೆ. ಅಂಗಡಿಗೆ ನಾನು ಹೋದಾಗ ಅಂಗಡಿಯಲ್ಲಿ ಮೇಲೆ ಹೇಳಿದ ಚಿನ್ನಾಭರವನ್ನು ತೆಗೆಸಿದ್ದರೇ ಎಂದರೆ ಹೌದು. ನಮಗೆ ಪೋಲಿಸರು ತೋರಿಸಿದ ಮೇಲೆ ಚಿನ್ನಾಭರಣ ಎಂದು ಗೊತ್ತಾಗಿದೆ ಎಂದರೆ ಹೌದು ಮುಂದುವೆದು ನಮ್ಮ ಮಾಲು ನನಗೆ ಗೊತ್ತಾಗುತ್ತದೆ. ಕದ್ದ ಮಾಲು ನನ್ನ ಸೋದರ ಮಾವನ ಮನೆಯದ್ದು. ಅದು ಅಮಚಿನಡ್ಕದಲ್ಲಿ ಇದೆ. ಅಂಗಡಿಯಲ್ಲಿ ನನ್ನ ಸಮಕ್ಷಮ ಆರೊಪಿ ಚಿನ್ನದ ಆಭರಣ ಮಾಡಿದ್ದ ಬಗ್ಗೆ ಯಾವುದೇ ರಶೀದಿ ತೋರಿಸಿಲ್ಲ. ಸಾಕ್ಷಿ ಸ್ವತಃ ಚಿನ್ನ ಮಾರಾಟ ಮಾಡಿದ ಬಗ್ಗೆ ಅಂಗಡಿ ಮಾಲಿಕ ಹೇಳಿದ್ದಾನೆ. ಆರೋಪಿಯು ಚಿನ್ನದ ಅಂಗಡಿಯಲ್ಲಿ ಯಾವಾಗ ಮಾರಾಟ ಮಾಡಿದ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಆಭರಣಗಳ ಪೋಟೋ ತೆಗೆಯಲಾಗಿದೆ. 2 ವರ್ಷಗಳಾದ ಕಾರಣ ಸದರಿ ಆಭರಣಗನ್ನು ಒಟ್ಟಿಗೆ ಅಥವಾ ಬಿಡಿ ಬಿಡಿ ಯಾಗಿ ತಗೆದಿದ್ದಾರೆ ಎಂದು ನನಗೆ ನನಪು ಇಲ್ಲ. 2 ಉಂಗುರ ದೊಡ್ಡದು, 3 ಉಂಗುರ ಸಣ್ಣದು. ಚಿನ್ನದ ತುಂಡುಗಳು ಇದ್ದವು. 5 ಉಂಗರಗಳಲ್ಲಿ ಡಿಸೈನ ಇತ್ತು. ಯಾವ ಡಿಸೈನ ಎಂದು ಹೇಳಲು ಆಗುವುದಿಲ್ಲ. ಡಿಸೈನ ಇದ್ದ ಬಗ್ಗೆ ಮಹಜರ ನಲ್ಲಿ

ಕಾಣಿಸಿದ್ದಾರೋ ಇಲ್ಲವೊ ನೆನಪು ಇಲ್ಲ. ಮೇಲೆ ಹೇಳಿದ ಆಭರಣ ಹೊರತು ಪಡಿಸಿ ಬೇರೆ ಆಭರಣ ವಶಪಡಿಸಿದ್ದಾರೆಯೇ ಎಂದರೆ ಬೇರೆ ಪ್ರಕರಣದ್ದು ಗೊತ್ತಿಲ್ಲ, ಈ ಪ್ರಕರಣದ ಮಾತ್ರ ಗೊತ್ತು. ನಿಪಿ-6 ರಲ್ಲಿ ಉಂಗುರ ಕಾಣುವುದಿಲ್ಲ ಅಂದರೆ ಸರಿಯಲ್ಲ. ಪೊಟೊದಲ್ಲಿರುವ ಆಭರಣಗಳು ಉಂಗುರ ಅಲ್ಲ ಅಂದರೆ ಸರಿಯಲ್ಲ. ಪೊಟೊದಲ್ಲಿರುವ ಆಭರಣಗಳು ಎಷ್ಟು ತೂಕ ಎಂದು ನಿಖರವಾಗಿ ಹೇಳಲು ಸಾಧ್ಯ ಇಲ್ಲ. ಉಂಗುರ ಬಿಟ್ಟು ಉಳಿದ ಆಭರಗಳು ಎಷ್ಟು ಇತ್ತು ಎಂದು ಗೊತ್ತಿಲ್ಲ, ಅದು ತುಂಡು ತುಂಡು ಇತ್ತು. ತುಂಡುಗಳು ಒಟ್ಟಾಗಿ ಪೊಲಿಸರು ತೂಕ ಮಾಡಿದರು, ಬೇರೆ ಆಭರಣಗಳನ್ನು ಸಪರೇಟಾಗಿ ತೂಕ ಮಾಡಿದ್ದರು. ಸದರಿ ಮಹಜರಿನಲ್ಲಿ ಎನೆಲ್ಲ ಬರೆದಿದ್ದಾರೆ ಎಂದು ಈಗ ನಿಖರವಾಗಿ ಹೇಸಲು ಸಾಧ್ಯವಿಲ್ಲ. ಸದರಿ ಜ್ಯೂವೆಲರ್ಸನ ಚಕಬಂದಿ ಹೇಳಲು ಬರುವುದಿಲ್ಲ ಎಕೆಂದರೆ ದಿಕ್ಕು ನನಗೆ ಗೊತ್ತಾಗುವುದಿಲ್ಲ. ಮುಖ್ಯ ರಸ್ತೆಯಿಂದ ಬಾವಾ ಅಂಗಡಿ 50 ರಿಂದ 100 ಮೀಟರ ಅಂತರ ಇದೆ. ನನ್ನ ಮಾವನ ಹೆಸರು ಪಿ ಡಿ ಮಹಮ್ಮದ. ಚಾಸಾ-1 ರ ಜೊತೆ ಸಂಪ್ಯ ಠಾಣೆ ಹೋಗಿ ಅಲ್ಲಿ ಸಹಿ ಮಾಡಿದ್ದೆನೆ ಎಂದರೆ ಸರಿಯಲ್ಲ.

ನಾನು ಪೊಲಿಸರೊಂದಿಗೆ ಯಾವುದೆ ಜುವೆಲ್ಲರಿಗೆ ಹೋಗಿಲ್ಲ, ಮುದ್ದೆಮಾಲು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು